# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ: 0816-2254546, 0816-2255596, 0816-2255597 ಫ್ಯಾಕ್ಸ್: 0816-2270719

ಸಂಖ್ಯೆ:ತುವಿ:ಖ.ಕೋ:ದೈ.ಶಿ:2024-25/1781 ದಿನಾಂಕ:30.08.2024

**ದರಪಟ್ಟಿ ಆಹ್ವಾನ**

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗಕ್ಕೆ ಅಗತ್ಯವಿರುವ Trophy & Medals ಸರಬರಾಜು ಪಡೆಯಲು ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ:1. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರ ಪತ್ರ ದಿನಾಂಕ: 18.04.2024.
2. ದಿನಾಂಕ:23.12.2022ರಂದು ನಡೆದ ಪ್ರಥಮ ಖರೀದಿ ಸಮಿತಿ ಸಭೆಯ ನಿರ್ಣಯ.
3. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/9035 ದಿನಾಂಕ: 09.09.2022.
4. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:06.08.2024.

*****

ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗಕ್ಕೆ ಅಗತ್ಯವಿರುವ Trophy & Medals ಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವ ಸಂರಚನೆಯಂತೆ ಹಾಗೂ ಷರತ್ತುಗಳಿಗೊಳಪಟ್ಟು ಸರಬರಾಜು ಪಡೆಯಲು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಉಲ್ಲೇಖ(2)ರ ಸಭಾ ನಿರ್ಣಯದಂತೆ ಹಾಗೂ ಉಲ್ಲೇಖ(3)ರ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ತಿದ್ದುಪಡಿ 4(i)(ii) ರ ನಿಯಮದಂತೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| Sl. No. | Particulars | Specification | Quantity | Per Quantity Price (inclu All tax) |
|---|---|---|---|---|
| 1 | 1st Place – winner trophy | Quality – Metal<br>Size-21 inches, 03 inches base<br>On Trophies – TUMKUR UNIVERSITY INTER COLLEGIATE SPORTS AND GAMES 2024-25 should be printed | 36 nos. | |
| 2 | 2nd Place – Runner-up Trophy | Quality- Metal<br>Size-18 inches, 03 inches base<br>On trophies-TUMKUR UNIVERSITY INTER COLLEGIATE SPORTS AND GAMES 2024-25 should be printed | 36 nos. | |
| 3 | 1st Place - Medals | Quality- Metal<br>Type – Gold Colour Round Medal Size-2 ½ inches<br>On Medals – TUMKUR UNIVERSITY INTER COLLEGIATE SPORTS AND GAMES 2024-25 should be printed | 307 nos. | |
| 4 | 2nd Place - Medals | Quality – Metal<br>Type – Silver Colour Round Medal<br>Size- 2 ½ inches<br>On Medals- TUMKUR UNIVERSITY INTER COLLEGIATE SPORTS AND GAMES 2024-25 should be printed | 307 nos. | |
| 5 | 3rd Place - Medals | Quality – Metal<br>Type-Bronze Colour Round Medal<br>Size- 2 ½ inches<br>On Medals – TUMKUR UNIVERSITY INTER COLLEGIATE SPORTS AND GAMES 2024-25 should be printed | 86 nos. | |
| 6 | Athletics Overall Championship for Men & Women Trophy | Quality – Metal<br>Size- 21 inches, 03 inches base<br>On Trophies – TUMKUR UNIVERSITY INTER COLLEGIATE ATHLETIC MET 2024-25 (Men-01, Women-01) Should be printed | 02 nos. | |

(ಪು.ತಿ.ನೋ)

**ಷರತ್ತುಗಳು:**

1. ಮುಚ್ಚಿದ ಲಕೋಟೆಯ ಮೇಲೆ **"Trophy & Medals ಗಳನ್ನು ಸರಬರಾಜು ಮಾಡಲು ದರಪಟ್ಟಿ"** ಎಂದು ನಮೂದಿಸತಕ್ಕದ್ದು.
2. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572 103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 06.09.2024 ಅಪರಾಹ್ನ 12.30 ಗಂಟೆ.**
4. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
5. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 60 ದಿನಗಳವರೆಗೆ ಚಾಲ್ತಿಯಲಿರುತ್ತದೆ.
6. ಸರಬರಾಜು ಮಾಡಲು ಯಾವುದೇ ಮುಂಗಡ ಹಣವನ್ನು ನೀಡಲಾಗುವುದಿಲ್ಲ.
7. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮೊತ್ತ ಮತ್ತು ಸಾಗಾಣಿಕೆ ಮೊತ್ತವನ್ನು ಒಳಗೊಂಡಿರಬೇಕು.
8. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳಲ್ಲಿನ ಅತೀ ಕಡಿಮೆ ದರವನ್ನು ಪರಿಗಣಿಸಲಾಗುವುದು.
9. ದರಪಟ್ಟಿಯಲ್ಲಿ ನಮೂದಿಸಿರುವ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
10. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
11. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
12. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಕ್ರೀಡಾ ಸಾಮಗ್ರಿಗಳ ಮಾದರಿಯ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
13. ಸರಬರಾಜು ಮಾಡುವ ಮುನ್ನ Trophy & Medals ಗಳ ಮಾದರಿಗಳನ್ನು(Sample)ವಿಭಾಗದಲ್ಲಿ ಪರಿಶೀಲಿಸಿ ಒಪ್ಪಿಗೆ ಪಡೆದುಕೊಳ್ಳುವುದು.
14. ಷರತ್ತು ಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
15. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
16. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
17. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
ಖರೀದಿ ಕೋಶ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ನಿರ್ದೇಶಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
4. ರಕ್ಷಣಾ ಪ್ರತಿ.